ಶ್ರೀ ವೀರೇಂದ್ರ ಪಾಟೀಲ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರಿಗೆ ನಾನು ಹೇಳಬೇಕಾದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕನ್‌ಸಲ್ಟೇಟೀವ್ ಕಮಿಟಿ ಎಂದು ಮಾಡಿದ್ದೇವೆ, ನೀರಿನ ಸರಬರಾಜಿಗೆ ಸಂಬಂಧಪಟ್ಟ ವಿಷಯ ಮತ್ತು ರಸ್ತೆಗಳ ಅಭಿವೃದ್ಧಿ ಇತ್ಯಾದಿ ವಿಷಯಗಳನ್ನು ಅವರು ವಿಚಾರ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಇಂಟರ್‌ನರ್ ರಸ್ತೆಗಳನ್ನು ಮಾಡುವುದು ಅವಶ್ಯಕ. ಆದ್ದರಿಂದ ಇರಿಗೇಷನ್ ಏರಿಯಾಕ್ಕೆ ಯಾವ ಯಾವ ರಸ್ತೆಗಳು ಎಷ್ಟು ಬೇಕೋ ಅದನ್ನೆರ್ಲಾ ನೋಡಿ ಕೊಂಡು ಅದರ ಜೊತೆಯಲ್ಲಿಯೇ ಈ ಇರಿಗೇಷನ್ ಟ್ರಾಕ್ಟ್ ರಸ್ತೆಯ ಕೆಲಸಗಳನ್ನು ತೆಗೆದುಕೊಳ್ಳುವುದು ಸೂಕ್ತವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಪ್ರಾಜೆಕ್ಟುಗಳಲ್ಲಿ ನಮ್ಮ ಪಾಲಸಿಯ ಪ್ರಕಾರ ಇರಿಗೇಷನ್ ಆಯಕಟ್ಟಿನ ರಸ್ತೆಗಳ ನಿರ್ಮಾಣದ ವೆಚ್ಚವನ್ನು ಪ್ರಾಜೆಕ್ಟಿನ ಖರ್ಚಿಗೆ ಚಾರ್ಜ್ ಮಾಡುತ್ತೇವೆ. ಬಾಕಿ ರಸ್ತೆಗಳ ನಿರ್ಮಾಣದ ಕೆಲಸವನ್ನು ರೆಗ್ಯುಲರ್ ಪಬ್ಲಿಕ್ ವರ್ಕ್ಸ್ ಇರಾಖೆಯವರು ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ವ್ಯವಸಾಯದ ಅಭಿವೃದ್ಧಿಯ ದೃಷ್ಟಿಯಿಂದ ಇರಿಗೇಷನ್ ಟ್ರಾಕ್ ರಸ್ತೆಯನ್ನು ಇಂಪ್ರೂವ್ ಮಾಡಬೇಕೆಂದು ಹೇಳಿದರೂ ಕೂಡ 1965ನೇ ಇಸವಿಯಿಂದ ಆ ಬಾಬಿಗೆ ಹಣವನ್ನು ಒದಗಿಸಿಲ್ಲ ಎಂದು ಹೇಳಿದ್ದೀರಿ, ಇರಿಗೇಷನ್ ಟ್ರಾಕ್ ರಸ್ತೆಗಳು ಆಗದೇ ಹೋದರೆ ವ್ಯವಸಾಯದ ಅಭಿವೃದ್ಧಿ ಹೇಗಾಗುತ್ತದೆ ? ಆದ್ದರಿಂದ ಇನ್ನು ಮುಂದೆ ಈ ಇರಿಗೇಷನ್ ಟ್ರಾಕ್ ರಸ್ತೆಗಳಿಗೆ ಹಣವನ್ನು ಒದಗಿಸುವಂತೆ ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—1965ನೇ ಇಸವಿಯಿಂದ ಆ ಕೆಲಸಕ್ಕೆ ಹಣವನ್ನು ಒದಗಿಸಿಲ್ಲ ಎಂದು ಹೇಳಿಲ್ಲ. ಯಾವ ಹೊಸ ರಸ್ತೆಗಳ ನಿರ್ಮಾಣವನ್ನೂ ಕೈಗೊಂಡಿಲ್ಲ ಎಂದು ಹೇಳಿದೆ. ಪ್ರತಿವರ್ಷವೂ ಆ ಕೆಲಸಕ್ಕೆ ಹಣವನ್ನು ಒದಗಿಸುತ್ತೇವೆ. ಈಗಾಗಲೇ ಪ್ರಾರಂಭ ಮಾಡಿರತಕ್ಕ ರಸ್ತೆಗಳ ಕೆಲಸವನ್ನು ಮುಗಿಸುವುದಕ್ಕೆ ಆ ಹಣವನ್ನು ಖರ್ಚು ಮಾಡುತ್ತಿದ್ದೇವೆ.

Lift Irrigation Schemes in Bidar District

165. Sri G. CHANDRAKANTH (Bidar).—

Will the Minister for Public Works be pleased to state :—

(*a*) the number of Lift Irrigation Shemes sanctioned so far in Bidar District ;

(*b*) the number of them that were completed (their names may be given) ;

(*c*) the number yet to be completed (with their names) ?

A.—Sri ALUR HANUMANTHAPPA (Deputy Minister for Minor Irrigation).—

(*a*) One.

(*b*) Nil.

(*c*) One. Lift Irraigation Scheme near Chimkod is under execution.

Sri G. CHANDRAKANTH.—May I know what is the estimated cost of lift Irrigation Scheme undertaken near Chimkod and when it will be completed ?

† Sri ALUR HANUMANTHAPPA.—It is 1 lakh 99 thousand ruppes.

Sri G. CHANDRAKANTH.—Sir, in reply to question (a) it is said that only one lift Irrigation scheme has been sanctioned so far. Is it not really deplorable that you have not taken up even a single scheme during the last five year plan period ?

Sri ALUR HANUMANTHAPPA.—Only one scheme has been taken up. No other scheme has been taken up so far.

Sri V. N. PATIL.—May I bring to your notice that in Gulbarga district in one single taluk there are more than four lift Irrigation Schemes. May I know, whether in Bidar district, is there no water potentiality for taking up more schemes ?

Sri ALUR HANUMANTHAPPA.—Sir, we have yet to investigate the river valley there. But seven schemes which were undertaken has been dropped now due to the reason that it will affect the Bidar water Supply Scheme.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆಗೆ ಸಂಬಂಧಪಟ್ಟಹಾಗೆ ಇರಿಗೇಷನ್ ಯೋಜನೆಗಳು ಎಷ್ಟು ಯೋಜನೆಗಳು ಸಿದ್ಧವಾಗಿವೆ ?

ಶ್ರೀ ಆಲೂರು ಹನುಮಂತಪ್ಪ.—ಬೀದರ್ ಜಿಲ್ಲೆಗೆ ಸಂಬಂಧಪಟ್ಟಹಾಗೆ 7 ಯೋಜನೆಗಳಿವೆ. ಆ ಪೈಕಿ ಒಂದು ಮಾತ್ರ ಎಗ್ಜಿಕ್ಯೂಟ್ ಆಗುತ್ತಿದೆ. ಸರ್ವೆ ಆಗಬೇಕಾದ್ದು ಇನ್ನೂ ಅನೇಕ ಯೋಜನೆಗಳಿವೆ.

ಶ್ರೀ ಎಸ್. ಭೀಮಣ್ಣ.—ಸರ್ವೆ ಆಗಿರತಕ್ಕ ಯೋಜನೆಗಳು ಏತಕ್ಕೆ ಮಂಜೂರು ಆಗಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—ಬೀದರ್ ಜಿಲ್ಲೆಗೆ ನೀರು ಸರಬರಾಜಾಗುವುದಕ್ಕೆ ತೊಂದರೆ ಯಾಗುತ್ತದೆ ಎನ್ನುವ ದೃಷ್ಟಿಯಿಂದ 6 ಯೋಜನೆಗಳು ಎಗ್ಜಿಕ್ಯೂಟ್ ಆಗುತ್ತಾ ಇಲ್ಲ. ಒಂದು ಮಾತ್ರ ಎಗ್ಜಿಕ್ಯೂಟ್ ಆಗುತ್ತಿದೆ.

Sri J. P. SARVESH.—May I bring to your notice Sir, those taluks where more number of Irrigation works are taken up for the simple reason that Ministers are elected from that place and those taluks which are ignored just because opposition members are elected there. Is it not a fact, Sir ?

Sri ALUR HANUMANTHAPPA.—I totally refute this statement made by the Hon'ble member. Wherever there is water potentiality we do take up Irrigation Schemes, irrespective of the members of that area having been elected to opposition party or otherwise.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆಯಲ್ಲಿ ಕಾರಂಜಿ ಯೋಜನೆ, ಮಾಂಜ್ರಾ ಯೋಜನೆ ಮತ್ತು ನಾಗರಹಳ್ಳಿ ಯೋಜನೆ ಇವುಗಳು ಬಹಳ ಮುಖ್ಯವಾದ ಯೋಜನೆಗಳು. ಈ ಯೋಜನೆಗಳನ್ನು ತೆಗೆದುಕೊಳ್ಳುವುದರಿಂದ ಅನೇಕ ಜನಗಳಿಗೆ ಅನುಕೂಲವಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಬೀದರ್ ಜಿಲ್ಲೆಯಲ್ಲಿ ಮಾನ್ಯ ಸದಸ್ಯರು ಹೇಳಿದ ನದಿಗಳೇನೋ ಇವೆ. ಅಲ್ಲಿ ಬಹು ಮುಖ್ಯವಾಗಿ ಎಲೆಕ್ಟ್ರಿಕ್ ಲೈನು ಹಾಕಬೇಕಾಗಿದೆ. ಅಲ್ಲಿ ಎಲೆಕ್ಟ್ರಿಕ್ ಲೈನನ್ನು ಹಾಕದೇ ಇರುವುದರಿಂದ ಆ ಕೆಲಸಗಳು ಸ್ವಲ್ಪ ತಡವಾಗುತ್ತಿವೆ. ಆದಷ್ಟು ಬೇಗ ಎಲೆಕ್ಟ್ರಿಕ್ ಲೈನ್ ಹಾಕಿದರೆ ಅಲ್ಲಿ ಲಿಫ್ಟ್ ಇರಿಗೇಷನ್ ಯೋಜನೆಯನ್ನು ಸರ್ಕಾರದವರು ಮಂಜೂರು ಮಾಡಿ ಅವುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಂಗ್ರೆಸ್ ಸದಸ್ಯರುಗಳು ತಮ್ಮ ಏರಿಯಾದಲ್ಲಿ ಆಗಬೇಕಾದಂಥ ಕೆಲಸಗಳನ್ನು ಮಂತ್ರಿಗಳಲ್ಲಿ ಹೋಗಿ ಮಾಡಿಸಿಕೊಳ್ಳುತ್ತಾರೆ. ಎದುರು ಪಕ್ಷದ ಸದಸ್ಯರುಗಳ ಕ್ಷೇತ್ರವನ್ನು ಕೇಳುವವರೇ ಇಲ್ಲವಾಗಿದೆ. 40 ಕೋಟಿ ರೂಪಾಯಿಗಳ ಮಾಸ್ಟರ್ ಪ್ಲಾನ್ ಏನಿದೆ ಅದರ ಪ್ರಕಾರ ಕೆಲಸ ಮಾಡುತ್ತಿದ್ದೀರಾ? ಈ ಮಾಸ್ಟರ್ ಪ್ಲಾನ್‌ನೊಳಗೆ ಬೀದರ್ ಜಿಲ್ಲೆಯ ಚಿಮ್ ಕೋಡ್ ಬಳಿ ಒಂದು ಯಾತ ನೀರಾವರಿ ಯೋಜನೆಯನ್ನು ಸೇರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ಎಂಬುದನ್ನು ಈ ಸಭೆಗೆ ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀರ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಹೇಳುವಂಥದ್ದು ಕೇವಲ ಕಾಂಗ್ರೆಸ್ ಪಕ್ಷದ ಸದಸ್ಯರುಗಳ ಏರಿಯಾದಲ್ಲೇ ಕೆಲಸಗಳು ಆಗುತ್ತಿವೆ. ಎದುರು ಪಕ್ಷದ ಸದಸ್ಯರುಗಳ ಏರಿಯಾದಲ್ಲಿ ಯಾವ ಕೆಲಸಗಳೂ ಆಗುತ್ತಿಲ್ಲವೆಂದು ಈ ನಲದ ಬಡ್ಜೆಟ್‌ನ್ನು ನೋಡಿದರೆ ಮಾನ್ಯ ಸದಸ್ಯರುಗಳಿಗೆ ಗೊತ್ತಾಗುತ್ತದೆ. ಸರ್ಕಾರದವರು ಕೆಲಸಗಳನ್ನು ತೆಗೆದುಕೊಳ್ಳುವಾಗ ಆ ಪಕ್ಷದವರು ಈ ಪಕ್ಷದವರು ಎಂದು ಪರಿಗಣಿಸದೆ ಯೋಜನೆಗಳ ಬಗ್ಗೆ ಯಾವ ಯಾವ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಿರುತ್ತದೋ ಅಂಥವ್ದನ್ನು ಮೊದಲು ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೀದರ್ ಜಿಲ್ಲೆಯಲ್ಲಿ ಅನೇಕ ಕೆಲಸಕಾರ್ಯಗಳು ಪ್ರಾರಂಭವಾಗಿವೆ. ಈ ಭಾಗದಲ್ಲಿ ಲಫ್ಟ್ ಇರಿಗೇಷನ್ ತೆಗೆದುಕೊಳ್ಳಬಾರದೆಂದು ಅಲ್ಲ ಲಫ್ಟ್ ಇರಿಗೇಷನ್‌ನಿಂದ ಹೆಚ್ಚು ಪ್ರಯೋಜನವಾಗುವುದಿಲ್ಲವೆಂದು ತಿಳಿದು ಒಂದು ಪ್ಯಾಜೆಕ್ಟನ್ನು ಕಟ್ಟಬೇಕೆಂದಿದ್ದೇವೆ. ಹೆಚ್ಚು ಹೆಚ್ಚು ಬಾವಿಗಳನ್ನು ತೋಡಿಸಿದರೆ ನೀರು ಸಿಗಲಾರದೆಂದು ತಿಳಿದು ದೊಡ್ಡ ದೊಡ್ಡ ಕೆರೆಕಟ್ಟೆಗಳನ್ನು ಮಾಡಿಸಲು ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ.

Sri V. N. PATIL.—I wish to point out that only 7 villages are being submerged. But the Hon'ble Minister says that because of the possibility of submersion, no lift irrigation scheme is taken up. That is a wrong answer because only 7 villages are going to be submerged. Now out of 7 schemes only one scheme is taken up. There are three rivers; Manjra river is there; Karanja River is there; Nagarahalla is there. They are all with regular sources of water.

Sri VEERENDRA PATIL.—I did not say there is no potential for lift irrigation for Bidar District. I only said while taking up lift irrigation schemes, we should select such schemes which are not going to be infructuous after taking up the Karanja project. It is not with reference to submerged area, but, it is also with regard to command area that I referred to.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆಯಲ್ಲಿ ಲಫ್ಟ್ ಇರಿಗೇಷನ್ ತೆಗೆದುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲವೆಂದು ತಾವು ಹೇಳುವುದಾದರೆ ಈ ವರ್ಷವೇ ಕಾರಂಜ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ವೀರೇಂದ್ರ ಪಾಟೀರ್.—ಈ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಈ ರೀತಿಯ ಪ್ಯಾಜೆಕ್ಟ್ ಕಟ್ಟುವುದರಿಂದ ಹೆಚ್ಚಿನ ಅನುಕೂಲವಾಗುತ್ತದೆಯೇ ಹೊರತು ಹೆಚ್ಚು ಹೆಚ್ಚು ಬಾವಿಗಳನ್ನು ತೆಗೆಸುವುದರಿಂದ ನೀರು ಹೆಚ್ಚು ಸಿಗುವುದಿಲ್ಲವೆಂದು ತಿಳಿದು ಬಂದಿದೆ.

Sri G. CHANDRAKANTH.—In view of the replies given, shall we say that the Government is quite indifferent towards these parts for development?

Sri VEERENDRA PATIL.—Whatever I have said just now only goes to show that the Government is very keen on developing this area.